ವೈದ್ಯನಾಥನ್ ವರದಿ ಶಿಫಾರಸ್ಸು

296 (723) **ಶ್ರೀ ಎನ್. ಹೆಚ್. ಶಿವಶಂಕರ ರೆಡ್ಡಿ (ಗೌರಿಬಿದನೂರು):**–ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ವೈದ್ಯನಾಥನ್ ವರದಿ ಶಿಫಾರಸ್ಸಿನನ್ವಯ ಯಾವ ಯಾವ ಸಹಕಾರಿ ಸಂಘಗಳಿಗೆ ಎಷ್ಟಷ್ಟು ಹಣ ಸರ್ಕಾರದಿಂದ ಬಂದಿದೆ (ಸಂಘವಾರು ವಿವರ ಒದಗಿಸುವುದು) ಮಂಜೂರಾಗಿರುವ ಅನುದಾನದ ಹಣ ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆಯೇ; (ಮಾಹಿತಿ ನೀಡುವುದು) ಎಷ್ಟು ಸಹಕಾರ ಸಂಘಗಳು ಮರುಜೀವ ಪಡೆದುಕೊಂಡಿವೆ; ಎಷ್ಟು ಸಹಕಾರ ಸಂಘಗಳು ಸಮರ್ಪಣಗೊಂಡಿವೆ; (ವಿವರ ಒದಗಿಸುವುದು)

(ಆ) ಚಿಕ್ಕಬಳ್ಳಾಪುರ ಜಿಲ್ಲೆಯು ಹೊಸದಾಗಿ ರಚನೆಯಾಗಿದ್ದು ಈ ಹಿಂದೆ ಕೋಲಾರ ಜಿಲ್ಲಾ ಸಹಕಾರ ಬ್ಯಾಂಕ್‌ಗಳನ್ನು ವಿಭಜಿಸಿ ಹೊಸ ಜಿಲ್ಲೆಗೆ ಇನ್ನೊಂದು ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮವೇನು; ಹೊಸ ಜಿಲ್ಲೆಗೆ ಯಾವಾಗ ಸಹಕಾರಿ ಬ್ಯಾಂಕ್‌ನ ಕೇಂದ್ರವನ್ನು ಸ್ಥಳಾಂತರಿಸಲಾಗುವುದು.

ಶ್ರೀ ಬಿ. ಜೆ. ಪುಟ್ಟಸ್ವಾಮಿ (ಮಾನ್ಯ ಸಹಕಾರ ಸಚಿವರು):–

(ಅ) ಪ್ರೊಫೆಸರ್ ಎ. ವೈದ್ಯನಾಥನ್ ಸಮಿತಿ ಶಿಫಾರಸ್ಸಿನನ್ವಯ ಗೌರಿಬಿದನೂರು ತಾಲ್ಲೂಕಿನ 24 ಅರ್ಹ ಸಹಕಾರ ಸಂಘಗಳಿಗೆ ಒಟ್ಟು ರೂ. 545.89 ಲಕ್ಷಗಳು ಸರ್ಕಾರದಿಂದ ಬಿಡುಗಡೆಯಾಗಿದ್ದು, ಸಂಘವಾರು ಬಿಡುಗಡೆಯಾಗಿರುವ ಮೊತ್ತ ಮತ್ತು ಸದರಿ ಮೊತ್ತವನ್ನು ಸಮರ್ಪಕವಾಗಿ ಬಳಸಿಕೊಂಡಿರುವ ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಸಹಕಾರ ಸಂಘಗಳ ಹೆಸರು	ಸರ್ಕಾರ ದಿಂದ ಬಿಡುಗಡೆ ಯಾದ ಮೊತ್ತ	ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೊತ್ತ, ಬಿಡುಗಡೆಯಾಗಿರುವ ವಿವರ		
			ಸಂಘದಿಂದ ಬ್ಯಾಂಕಿಗೆ ಬಾಕಿಉಳ್ಳದ್ದ ಸಾಲದ ಅಸಲು ಮತ್ತು ಬಡ್ಡಿ ಹೊಂದಾಣಿಕೆ	ಸಂಘದ ಹೆಸರಿನಲ್ಲಿ ಅವಧಿ ಠೇವಣಿ ಯಲ್ಲಿ ತೊಡಗಿಸಿ ರುವ ಮೊತ್ತ	ವ್ಯಾಪಾರಾಭಿ ವೃದ್ಧಿಗೆ ಸಂಘಕ್ಕೆ ಬಿಡುಗಡೆ ಮಾಡಿರುವ ಮೊತ್ತ
1	ಕನಬಾ ಡಿಎಸ್‌ಎಸ್ ಎನ್	20.64	0.00	10.64	10.00
2	ನಾಮಗೊಂಡ್ಲು	50.41	0.00	40.41	10.00
3	ಕಡಬೂರು	47.72	40.23	2.49	5.00
4	ಶ್ಯಾಂಪುರ	47.85	30.90	9.95	7.00
5	ನಗರಗೆರೆ	53.53	0.00	43.53	10.00
6	ಹರೇಚಿದನೂರು	11.69	2.11	7.58	2.00
7	ಕಲ್ಲೂಡಿ	5.91	5.31	0.60	0.00
8	ನೋಣಗಾನಹಳ್ಳಿ	26.38	14.57	10.81	1.00
9	ರಾಮಾಪುರ	20.60	6.90	10.70	3.00
10	ವಾಟದಹೊಸಹಳ್ಳಿ	7.12	6.59	0.00	0.53
11	ಭಡಗೂರು	16.22	16.22	0.00	0.00
12	ಮೇಳ್ಯ	10.06	7.91	1.15	1.00
13	ಚಿಸಲಹಳ್ಳಿ	11.65	0.00	9.65	2.00
14	ಮಂಚೇನಹಳ್ಳಿ	25.47	0.00	20.47	5.00
15	ಹಂಪಸಂದ್ರ	15.62	14.14	0.00	1.48
16	ಬಾವಿಮರಳೂರು	15.77	12.93	0.00	2.84
17	ಕಾಚಮಾಚನಹಳ್ಳಿ	14.04	10.33	2.21	1.50
18	ಕುರೂಡಿ	37.79	30.17	5.62	2.00
19	ಚಂದನದೂರು	10.98	5.74	4.24	1.00
20	ಹೊಸೂರು	11.79	8.02	2.77	1.00
21	ಅಲೀಪುರ	36.74	0.00	31.74	5.00
22	ತೊಂಡೇಬಾವಿ	15.78	1.38	12.39	2.00
23	ಬೇವಿನಹಳ್ಳಿ	13.31	13.31	0.00	0.00
24	ಜರಬಂಡಹಳ್ಳಿ	18.82	13.38	3.44	2.00
ಒಟ್ಟು		545.89	240.14	230.39	75.35

ಗೌರಿಬಿದನೂರು ತಾಲ್ಲೂಕಿನಲ್ಲಿ ಒಟ್ಟು 09 ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘಗಳು ಅನರ್ಹ ಸಹಕಾರ ಸಂಘಗಳಾಗಿದ್ದು, ಈ 09 ಸಹಕಾರ ಸಂಘಗಳ ಪೈಕಿ ಒಂದು ಸಹಕಾರ ಸಂಘವನ್ನು (ಅಲಕಾಪುರ ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘ) ಸಮಾಪನೆಗೊಳಿಸದೆ ಉಳಿಸಿಕೊಂಡು ಮರುಜೀವ ನೀಡಲಾಗಿರುತ್ತದೆ. ಉಳಿದ 08 ಅನರ್ಹ ಸಹಕಾರ ಸಂಘಗಳ ಪೈಕಿ (1) ಚೋಳಶೆಟ್ಟಿಹಳ್ಳಿ, (2) ಜೀಲಾಕುಂಟೆ ಮತ್ತು (3) ಹಳೇಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘಗಳನ್ನು ತಹಲ್‌ವರೆವಿಗೂ ಸಮಾಲೋಚನೆಗೊಳಿಸಲಾಗಿದೆ.

ಚಿಕ್ಕಕುರುಗೋಡು ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘ ನಿ., ಈ ಸಂಘದ ವಿಶೇಷ ಆಡಿಟ್‌ಗೆ ಈ ಹಿಂದೆ ಬಾಕಿ ಇದ್ದುದರಿಂದ ಪ್ರೊಫೆಸರ್ ಎ. ವೈದ್ಯನಾಥನ್ ಪ್ಯಾಕೇಜಿನಡಿ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ. ಪ್ರಸ್ತುತ ವಿಶೇಷ ಆಡಿಟ್ ಬಾಕಿಯಿರುತ್ತದೆ.

(ಆ) ಚಿಕ್ಕಬಳ್ಳಾಪುರ ಜಿಲ್ಲೆಯು ಹೊಸದಾಗಿ ರಚನೆಯಾಗಿದ್ದು ಕೋಲಾರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ವಿಭಜಿಸಿ ಚಿಕ್ಕಬಳ್ಳಾಪುರ ಜಿಲ್ಲಾ ಇನ್ನೋಂದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ನಬಾರ್ಡ್, ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳನ್ವಯ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕಾಗಿದ್ದು ಹಾಲಿ ಇರುವ ಬ್ಯಾಂಕು ಆರ್ಥಿಕವಾಗಿ ಸದೃಢವಾಗಿಲ್ಲದ ಕಾರಣ ಹೊಸ ಬ್ಯಾಂಕನ್ನು ಸ್ಥಾಪಿಸಲು ಅವಕಾಶವಿರುವುದಿಲ್ಲ.

ಔಷಧಿಗಳ ಕೊರತೆ

299 (726) **ಶ್ರೀ ಶಿವಶಂಕರ ರೆಡ್ಡಿ ಎನ್.ಎಚ್. (ಗೌರಿಬಿದನೂರು)**:–ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರತಿ ತಾಲ್ಲೂಕಿನಲ್ಲಿ ಎಲ್ಲಾ ಪಶುವೈದ್ಯಕೀಯ ಆಸ್ಪತ್ರೆಗಳಿಗೆ ಈಗ ಸರ್ಕಾರ ಒದಗಿಸುತ್ತಿರುವ ಔಷಧಿಗಳು ಕೇವಲ ಮೂರು ತಿಂಗಳಿಗೆ ಮಾತ್ರ ಲಭ್ಯವಿದ್ದು, ಉಳಿದ ತಿಂಗಳುಗಳಲ್ಲಿ ವೈದ್ಯರು ಚೀಟಿ ಬರೆದುಕೊಟ್ಟು ಖಾಸಗಿಯಾಗಿ ಖರೀದಿಸುವ ಹೊಣೆ ಮತ್ತು ಅನಿವಾರ್ಯ ಪರಿಸ್ಥಿತಿ ರೈತರಿಗೆ ಬಂದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

(ಇ) ಆಯವ್ಯಯದಲ್ಲಿ ಅನುದಾನವನ್ನು ಹೆಚ್ಚಿಸಿ ಪೂರ್ಣ ವರ್ಷದಲ್ಲಿ ಔಷಧಿ ಸಿಗುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?